**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ.**

**ದಿನಾಂಕಃ 2 ನೇ ಡಿಸೆಂಬರ್ 2024**

**ಎಸ್.ಸಿ ನಂಃ 40-2024**

ಪಿರ್ಯಾದುದಾರರು ಃ ರಾಜ್ಯಪರ ರಾಯಲ್ ಪಾಡ್ ಪೊಲೀಸ್

ವಿರುದ್ಧ

ಆರೋಪಿಗಳು ಃ 1. ಕೃಷ್ಣಪ್ಪ. ಜಿ.ವಿ
ಬಿನ್ ಲೇಟ್ ಜೇಮಾ ವೆಂಕಟರಾಯಪ್ಪ
ವಯಸ್ಸು 55 ವರ್ಷ

2. ಗೋವಿಂದಮ್ಮ ಉ ಸರಸ್ವತಮ್ಮ
ಕೋಂ ಕೃಷ್ಣಪ್ಪ ಜಿ.ವಿ,
ವಯಸ್ಸು 50 ವರ್ಷ

1 ಮತ್ತು 2 ನೇ ಆರೋಪಿತರ ವಾಸಃ
ಕುರಿಗೇಪಲ್ಲಿ ಗ್ರಾಮ,
ಶ್ರೀನಿವಾಸಪುರ ತಾಲ್ಲೂಕು.
ಕೋಲಾರ ಜಿಲ್ಲೆ.

## ದೋಷಾರೋಪಣೆ

ಶ್ರೀಮತಿ ಬಿ.ಎಸ್.ಜಯಶ್ರೀ, ಎಲ್.ಎಲ್.ಎಂ 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ ಆದ ನಾನು ಈ ಕೆಳಕಂಡಂತೆ ನಿಮ್ಮ ವಿರುದ್ದ ದೋಷಾರೋಪಣೆಯನ್ನು ರಚಿಸಿರುತ್ತೇನೆ.

ದಿಃ 17-5-2022 ರಂದು ಬೆಳಿಗ್ಗೆ 10-30 ಗಂಟೆಯ ಸಮಯದಲ್ಲಿ ಸಾಕ್ಷಿ-1 ರವರು ತಮ್ಮ ಭಾಗಕ್ಕೆ ಬಂದಿದ್ದ ಅಂಗಡಿಯನ್ನು ಕ್ಲೀನ್ ಮಾಡಲು ಅಂಗಡಿಯ ಬೀಗವನ್ನು ತೆಗೆಯುತ್ತಿದ್ದಾಗ, 1 ನೇ ಅರೋಪಿಯಾದ ನೀವು ' ಯಾಕೆ ನೀನು ಅಂಗಡಿ ಬೀಗ ತೆಗೆಯುವುದು' ಎಂದು ಸಾಕ್ಷಿ-1 ರವರ ಮೇಲೆ ಜಗಳ ತೆಗೆದು ಗಲಾಟೆ ಮಾಡಿರುತ್ತೀರಿ ನಂತರ 2 ನೇ ಆರೋಪಿಯಾದ ನೀವು ಸಾಕ್ಷಿ-1 ರವರನ್ನು ಅವಾಚ್ಯ ಶಬ್ದಗಳಿಂದ ಬೈದು ಅವಮಾನವನ್ನುಂಟು ಮಾಡಿರುತ್ತೀರಿ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರ ಅಡಿಯಲ್ಲಿ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಕೃತ್ಯ ಎಸಗಿರುತ್ತೀರೆಂದು ಆರೋಪಿಸಿರುತ್ತೇನೆ.

ಎರಡನೇಯದಾಗಿ ಮೇಲೆ ಹೇಳಿದ ತಾರೀಖು, ತಿಂಗಳು, ಸಮಯದಂದು ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಚಾಸಾ-1 ರವರಿಗೆ ಹಲ್ಲೆ ಮಾಡುವ ಉದ್ದೇಶದಿಂದ 2 ನೇ ಆರೋಪಿಯಾದ ನೀವು 1 ನೇ ಆರೋಪಿಗೆ ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನಿಗೆ ಸಾಕ್ಷಿ-1 ರವರನ್ನು ಸಾಯಿಸಿ ಬಿಡಿ ಎಂದು ಹೇಳಿದ್ದು ನೀವುಗಳು ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನೊಂದಿಗೆ ಸೇರಿ ರಾಡಿನಿಂದ ತಲೆಯ ಹಿಂಭಾಗಕ್ಕೆ ಹೊಡೆದು ರಕ್ತಗಾಯವನ್ನುಂಟು ಮಾಡಿದ್ದು ಅಂತಹ ಕೃತ್ಯದಿಂದ ಯಾವುದೇ ವ್ಯಕ್ತಿಗೆ ನೋವು ಉಂಟಾದರೆ, ಅಪರಾಧಿಯು ಜೀವಾವಧಿಯವರೆಗೆ ಜೈಲು ಶಿಕ್ಷೆಗೆ ಹೊಣೆಗಾರನಾಗಬೇಕಾಗುತ್ತದೆ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 307 ಸಹವಾಚಕ ಕಲಂ 34 ರ ಅಡಿಯಲ್ಲಿ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಕೃತ್ಯ ಎಸಗಿರುತ್ತೀರೆಂದು ಆರೋಪಿಸಿರುತ್ತೇನೆ.

ಮೂರನೇಯದಾಗಿ ಮೇಲೆ ಹೇಳಿದ ತಾರೀಖು, ತಿಂಗಳು, ಸಮಯದಂದು 1 ನೇ ಆರೋಪಿಯಾದ ನೀವು ಸಾಕ್ಷಿ-1 ರವರನ್ನು ಕಲ್ಲಿನಿಂದ ಬಲ ಮೊಣಕೈ ಬಳಿ ಹೊಡೆದು ರಕ್ತಗಾಯವನ್ನುಂಟು ಮಾಡಿದ್ದು ಹಾಗೂ 1 ನೇ ಆರೋಪಿಯ ಮಗ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಕೈಯಲ್ಲಿ ಕಬ್ಬಿಣದ ರಾಡ್‌ನಿಂದ ಪುನಃ ಹೊಡೆಯಲು ಬಂದಾಗ ಚಾಸಾ-1 ರವರು ತನ್ನ ಎರಡು ಕೈಗಳನ್ನು ಅಡ್ಡ ಇಟ್ಟಾಗ ರಾಡ್ ಕೈಗಳಿಗೆ ತಗುಲಿ ಮೂಳೆ ಮುರಿತದ ಭಾರಿ ಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 326 ಸಹವಾಚಕ ಕಲಂ 34 ರ ಅಡಿಯಲ್ಲಿ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಕೃತ್ಯ ಎಸಗಿರುತ್ತೀರೆಂದು ಆರೋಪಿಸಿರುತ್ತೇನೆ.

ನಾಲ್ಕನೇಯದಾಗಿ ಮೇಲೆ ಹೇಳಿದ ತಾರೀಖು, ತಿಂಗಳು, ಸಮಯದಂದು ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಸಾಕ್ಷಿ-1 ರವರನ್ನು ನೀನು ಇದ್ದರೆ ತಾನೇ ನಮ್ಮ ಆಸ್ತಿಗೆ ಅಡ್ಡ ಬರುವುದು ಈ ದಿನ ನಿನ್ನನ್ನು ಸಾಯಿಸಿ ಬಿಡುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರ ಅಡಿಯಲ್ಲಿ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಕೃತ್ಯ ಎಸಗಿರುತ್ತೀರೆಂದು ಆರೋಪಿಸಿರುತ್ತೇನೆ.

ಈ ಮೇಲಿನ ಆರೋಪಗಳಿಗೆ ನೀವು ವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ನಿರ್ದೇಶಿಸಿರುತ್ತೇನೆ.

ಸಹಿ /-

**(ಬಿ.ಎಸ್. ಜಯಶ್ರೀ )**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಕೋಲಾರ.**